

بسم اللهِ الرّحمٰنِ الرّحيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **12–11–2021** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ)**

أَشْهَدُ أَنْ لَّا إِلٰهَ إِلَّا اللهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ۔

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ۔ بِسْمِ اللهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಹಫ್ಸ(ರ) ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರೊಡನೆ ಒಮ್ಮೆ ಹೇಳಿದರು: ಅಲ್ಲಾಹನು ರಿಝ್ಕ್‌ನ್ನು ಎಂದರೆ ಜೀವನಾಧಾರವನ್ನು ಬಹಳಷ್ಟು ನೀಡಿರುವನು ಮತ್ತು ನಿಮಗೆ ವಿಜಯಗಳನ್ನು ದಯಪಾಲಿಸಿದ್ದಾನೆ ಹಾಗೂ ಸಾಕಷ್ಟು ಸಂಪತ್ತನ್ನು ಸಹ ನೀಡಿರುವನು, ಹೀಗಿರುವಾಗ ನೀವೇಕೆ ಸ್ವಲ್ಪ ಮೃದುವಾದ ಆಹಾರವನ್ನು ತಿನ್ನುತ್ತಿಲ್ಲ? ಹೆಚ್ಚು ನುಣುಪಾದ ವಸ್ತ್ರಗಳನ್ನು ಧರಿಸುವುದಿಲ್ಲವೇಕೆ? ಹಝ್ರತ್ ಉಮರ್(ರ) ಹೇಳಿದರು: ನನಗೆ ಸಾಧ್ಯವಾಗುವಷ್ಟರ ಮಟ್ಟಿಗೆ ನಾನು ಹಝ್ರತ್ ಪೈಗಂಬರ್(ಸ)ರ ಮತ್ತು ಹಝ್ರತ್ ಅಬೂಬಕರ್(ರ)ರ ಜೀವಿತಗಳ ಕಠಿಣತೆಯಲ್ಲಿ ಭಾಗೀದಾರನಾಗುವೆನು. ಹೀಗಾದರೆ, ಅವರಿಬ್ಬರ ಪರಲೋಕದ ಆರಾಮದಾಯಕ ಜೀವಿತದಲ್ಲಿ ಬಹುಶಃ ನಾನು ಅವರ ಜೊತೆಗೆ ಇರಬಹುದು.

ಹಝ್ರತ್ ಇಕ್ರಿಮ ಬಿನ್ ಖಾಲಿದ್ ವರದಿ ಮಾಡುತ್ತಾರೆ: ಬೇರೆ ಕೆಲವು ಜನರು ಸಹ ಹಝ್ರತ್ ಉಮರ್(ರ)ರೊಡನೆ ಹೇಳಿದರು: ನೀವು ಉತ್ತಮ ಆಹಾರವನ್ನು ತಿನ್ನುವುದಾದರೆ ಸತ್ಯಕ್ಕಾಗಿ ಕೆಲಸ ಮಾಡಲು ನಿಮಗೆ ಹೆಚ್ಚು ಶಕ್ತಿ ಲಭಿಸುವುದು. ಹಝ್ರತ್ ಉಮರ್(ರ) ಹೇಳಿದರು: ನಾನು ಹಝ್ರತ್ ಪೈಗಂಬರ್(ಸ) ಮತ್ತು ಹಝ್ರತ್ ಅಬೂಬಕರ್(ರ)ರ ಮಾರ್ಗವನ್ನು ಬಿಟ್ಟು ಬಿಡುವುದಾದರೆ, ನಾನು ಅವರಿಬ್ಬರನ್ನು ಕೊನೆಗೆ ಭೇಟಿಯಾಗಲು ಸಾಧ್ಯವಿಲ್ಲ.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಭಯ ಮತ್ತು ಅಪಾಯದ ಕಾಲಘಟ್ಟವನ್ನು ದೃಷ್ಟಿಯಲ್ಲಿರಿಸಿಕೊಂಡು ಒಂದಕ್ಕಿಂತ ಹೆಚ್ಚು ಸಾರನ್ನು ಉಪಯೋಗಿಸಬಾರದು ಎಂದು ಹಝ್ರತ್ ಪೈಗಂಬರ್(ಸ) ನಿರ್ದೇಶನ ನೀಡಿದ್ದರು. ಒಂದು ಬಾರಿ ಹಝ್ರತ್ ಉಮರ್(ರ)ರ ಮುಂದೆ ವಿನೆಗರ್ ಮತ್ತು ಉಪ್ಪನ್ನು ಇರಿಸಲಾಯಿತು. ಇವು ಎರಡು ಸಾರುಗಳಾಗಿವೆ ಎಂದು ಅವರು ಹೇಳಿದರು. ಹಝ್ರತ್ ಉಮರ್(ರ)ರ ಈ ಕೃತ್ಯವು ಅವರಿಗೆ ಹಝ್ರತ್ ಪೈಗಂಬರ್(ಸ)ರೊಡನೆ ಇದ್ದ ಪ್ರೇಮದ ಅತಿರೇಕದಿಂದಾಗಿತ್ತು. ಹಝ್ರತ್ ಮುಸ್ಲಿಹ್ ಮೌಊದ್(ರ) ಸಹ ತಹ್ರೀಕ್ ಜದೀದಿನ ಘೋಷಣೆ ಮಾಡುತ್ತಾ ಜಮಾಅತಿನ ಬಾಂಧವರು ತಮ್ಮ ಖರ್ಚನ್ನು ಕಡಿಮೆಗೊಳಿಸಿ ಚಂದಾವನ್ನು ನೀಡಲು ಸಾಧ್ಯವಾಗಲಿಕ್ಕಾಗಿ ಪ್ರತಿಯೊಬ್ಬ ಅಹ್ಮದಿಯು ಇಂದಿನಿಂದ ಕೇವಲ ಒಂದು ಸಾರನ್ನು ಉಪಯೋಗಿಸುವುದಾಗಿ ಪ್ರತಿಜ್ಞೆ ಮಾಡಬೇಕೆಂದು ಮನವಿ ಮಾಡಿದ್ದರು. ಅಲ್ಲಾಹನ ಅನುಗ್ರಹದಿಂದ ಈಗ ಸ್ಥಿತಿಗತಿಗಳು ಬದಲಾಗಿವೆ. ಆದ್ದರಿಂದ ಇದನ್ನು ಈಗ ಪಾಲಿಸಬೇಕಾಗಿಲ್ಲ. ಆದರೂ ದುಂದುವೆಚ್ಚ ಮಾಡಬಾರದು.

ಹಣ ಖರ್ಚು ಮಾಡುವುದಕ್ಕೆ ಸಂಬಂಧಿಸಿ ಅಲ್ಲಾಹನ ದಾಸರಿಗೆ ಇರುವ ಎರಡು ನಿಬಂಧನೆಗಳ ಕುರಿತು ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಒಂದನೆಯದು ಏನೆಂದರೆ, ಅವನು ತನ್ನ ಸಂಪತ್ತನ್ನು ಅನಾವಶ್ಯಕವಾಗಿ ಖರ್ಚು ಮಾಡಬಾರದು. ಎರಡನೆಯದಾಗಿ, ಅವನ ಆಹಾರವು ಶಕ್ತಿ ಮತ್ತು ದೈಹಿಕಬಲವನ್ನು ನೆಲೆನಿಲ್ಲಿಸಲಿಕ್ಕೆ ಆಗಿರಬೇಕು ಹಾಗೂ ಅವನ ವಸ್ತ್ರಧಾರಣೆ ದೇಹವನ್ನು ಮರೆಸಲು ಮತ್ತು ಸಂರಕ್ಷಣೆಗಾಗಿ ಆಗಿರಬೇಕು.

ಹಝ್ರತ್ ಉಮರ್(ರ) ಒಂದು ಬಾರಿ ಸಿರಿಯ ದೇಶಕ್ಕೆ ಹೋದಾಗ ಅಲ್ಲಿ ಕೆಲವು ಸಹಾಬರು ರೇಶ್ಮೆಯ ಬಟ್ಟೆಯನ್ನು ಧರಿಸಿದ್ದನ್ನು ಕಂಡಾಗ ಅದನ್ನು ಅವರು ತೀರಾ ಇಷ್ಟಪಡಲಿಲ್ಲ. ಆಗ ಒಬ್ಬ ಸಹಾಬಿಯು ನಿಲುವಂಗಿಯನ್ನು ಎತ್ತಿ ಅದರೊಳಗೆ ಧರಿಸಿರುವ ದಪ್ಪದ ಒರಟಾದ ಉಣ್ಣೆಯ ಜುಬ್ಬವನ್ನು ತೋರಿಸಿ ಹೇಳಿದರು: ನಾವು ನಮ್ಮ ಬಟ್ಟೆಗಳನ್ನು ದೇಶದ ರಾಜಕೀಯ ರೀತಿಯಂತೆ ಬದಲಾಯಿಸಿದ್ದೇವೆ. ಏಕೆಂದರೆ, ಇಲ್ಲಿಯ ಜನರಿಗೆ ಅತ್ಯಂತ ವೈಭವದಿಂದ ಇರುವ ನೇತಾರರನ್ನು ನೋಡಿ ಅಭ್ಯಾಸವಾಗಿ ಬಿಟ್ಟಿದೆ.

ಹಝ್ರತ್ ಉಮರ್(ರ) ತೋರಿಕೆ ಮತ್ತು ವೈಭವ ಮತ್ತು ದರ್ಪದ ವಸ್ತ್ರಗಳನ್ನು ಧರಿಸುವುದನ್ನು ಎಷ್ಟು ವಿರೋಧಿಸುತ್ತಿದ್ದರು ಎಂದರೆ, ತಾನು ಸೋಲಿಸಿದ ಶತ್ರು ಕೂಡ ಅಂತಹ ವಸ್ತ್ರಗಳನ್ನು ಧರಿಸಿ ತನ್ನ ಮುಂದೆ ಬರುವುದನ್ನು ಅವರು ಇಷ್ಟಪಡುತ್ತಿರಲಿಲ್ಲ. ತುಸ್ತರ್ ಮೇಲೆ ವಿಜಯ ಸಾಧಿಸಲಾದಾಗ, ಇರಾನಿನ ಸೇನಾಧಿಪತಿಯಾದ ಹುರ್‌ಮಝಾನನ್ನು ಹಝ್ರತ್ ಉಮರ್(ರ)ರ ಮುಂದೆ ಅವನ ರೇಶ್ಮೆಯ ಬಟ್ಟೆಯನ್ನು ತೊಡಿಸಿ ಕಳುಹಿಸಲಾಯಿತು. ಆಗ ಹಝ್ರತ್ ಉಮರ್(ರ) ಹೀಗೆ ಹೇಳಿದರು: ನಾನು ಅಲ್ಲಾಹನೊಡನೆ ನರಕದ ಬೆಂಕಿಯಿಂದ ಅಭಯ ಯಾಚಿಸುತ್ತೇನೆ ಮತ್ತು ಅಲ್ಲಾಹನೊಡನೆ ಸಹಾಯವನ್ನು ಬೇಡುತ್ತೇನೆ. ಹುರ್ಮಝಾನ್ ತನ್ನ ಹೊಳಪುಳ್ಳ ವಸ್ತ್ರಗಳನ್ನು ಮತ್ತು ಆಭರಣಗಳನ್ನು ಕಳಚುವ ತನಕ ಹಝ್ರತ್ ಉಮರ್(ರ) ಅವನೊಡನೆ ಮಾತನಾಡಲಿಲ್ಲ.

ಹಝ್ರತ್ ಉಮರರ ವಿನಯವಂತಿಕೆ ಮತ್ತು ದೇವಭಕ್ತಿಯ ಮಟ್ಟದ ಅಂದಾಜು ಈ ಸಂಗತಿಯಿಂದ ಆಗುತ್ತದೆ. ಹಝ್ರತ್ ಉರ್ವ ಬಿನ್ ಝುಬೇರ್ ವರದಿ ಮಾಡುತ್ತಾರೆ: ಹಝ್ರತ್ ಉಮರ್ ಬಿನ್ ಖತ್ತಾಬ್ ತನ್ನ ಹೆಗಲಲ್ಲಿ ನೀರಿನ ಒಂದು ಚರ್ಮದ ಚೀಲವನ್ನು ಎತ್ತಿರುವುದನ್ನು ಕಂಡಾಗ ನಾನು ಹೇಳಿದೆ:

ಹೇ ಅಮೀರುಲ್ ಮೂಮಿನೀನ್, ನೀವು ಹೀಗೆ ಮಾಡುವುದು ಸರಿಯಲ್ಲ. ಆಗ ಹಝ್ರತ್ ಉಮರ್(ರ) ಹೇಳಿದರು: ವಿವಿಧ ಸಮುದಾಯಗಳ ಸಂಘಗಳು ಅನುಸರಣೆ ಮತ್ತು ವಿಧೇಯತೆಯನ್ನು ತೋರಿಸುತ್ತಾ ನನ್ನ ಬಳಿಗೆ ಬಂದಾಗ ನನ್ನ ಮನಸ್ಸಲ್ಲಿ ದೊಡ್ಡತನದ ಭಾವನೆ ಇರುವಂತೆ ಅನುಭವವಾಯಿತು. ಆದ್ದರಿಂದ ಅದನ್ನು ನಿವಾರಿಸಲಿಕ್ಕಾಗಿ ನೀರಿನ ತೊಗಲ ಚೀಲವನ್ನು ಎತ್ತಿ ಹೋಗಲು ನಾನು ಯೋಚಿಸಿದೆ.

ಒಂದು ಬಾರಿ ಹಝ್ರತ್ ಉಮರ್(ರ) ಹಜ್ಜ್ ಕರ್ಮಾನುಷ್ಠಾನ ಮಾಡಿ ಮರಳಿ ಬರುವಾಗ ಒಂದು ಮರದ ಬಳಿ ನಿಂತುಕೊಂಡರು. ಹಝ್ರತ್ ಉಮರ್(ರ) ಹೇಳಿದರು: ನಾನು ನನ್ನ ಒಂಟೆಯನ್ನು ಮೇಯಿಸುತ್ತಿದ್ದ ಒಂದು ಕಾಲವಿತ್ತು. ಆಗ ಈ ಮರದ ಕೆಳಗೆ ಮಲಗಿದ ಕಾರಣದಿಂದ ನನ್ನ ತಂದೆ ನನ್ನನ್ನು ಬೈದಿದ್ದರು. ಆದರೆ ಈಗ ಅನೇಕ ಲಕ್ಷ ಜನರು ನನ್ನ ಸೂಚನೆ ಮೇರೆಗೆ ಜೀವ ತೊರೆಯಲು ತಯಾರಿರುವರು. ನಾನು ಹಝ್ರತ್ ಪೈಗಂಬರ್(ಸ)ರನ್ನು ನಂಬಿದಾಗ ಅಲ್ಲಾಹನು ನನಗೆ ಈ ದರ್ಜೆಯನ್ನು ನೀಡಿದನು. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ನೋಡಿರಿ, ಒಂಟೆಯನ್ನು ಮೇಯಿಸುವ ಒಬ್ಬನಿಗೆ ಅಧಿಕಾರದೊಂದಿಗೆ ಏನು ಸಂಬಂಧ? ಆದರೆ ಅವರು ಎಂತಹ ಶ್ರೇಷ್ಠ ಕೆಲಸಗಳನ್ನು ಮಾಡಿದ್ದರು ಎಂದರೆ, ಲೋಕವು ಈಗಲೂ ಅವರ ಮುಂದೆ ತಲೆಬಾಗುತ್ತದೆ. ಅವರ ರಾಜಕೀಯ ಜ್ಞಾನವನ್ನು ಲೋಕದ ಜನರು ಹೊಗಳುತ್ತಾರೆ. ಹಝ್ರತ್ ಅಬೂಬಕರ್(ರ) ಕೂಡ ಒಬ್ಬ ಸಾಮಾನ್ಯ ವ್ಯಾಪಾರಿಯಾಗಿದ್ದರು. ಆದರೆ ಅವರಿಗೆ ಇಂತಹ ವಿವೇಕ, ಬುದ್ಧಿ ಮತ್ತು ಯೋಚನಾಶಕ್ತಿ ಎಲ್ಲಿಂದ ಲಭಿಸಿತ್ತು ಎಂದು ಲೌಕಿಕರು ಆಶ್ಚರ್ಯಪಡುತ್ತಾರೆ. ಅವರಿಗೆ ಎಲ್ಲವೂ ಪವಿತ್ರ ಖುರ್ಆನಿನಿಂದ ಲಭಿಸಿತ್ತು ಎಂದು ನಾನು ಹೇಳುತ್ತೇನೆ. ಅವರು ಪವಿತ್ರ ಖುರ್ಆನನ್ನು ಗಮನವಿಟ್ಟು ಓದಿಕೊಂಡು ಚಿಂತನ ಮಂಥನ ಮಾಡಿದ್ದರು. ಅದರಿಂದ ಇಡೀ ಲೋಕಕ್ಕೆ ಅರಿಯದ ಸಂಗತಿಗಳು ಅವರಿಗೆ ಗೊತ್ತಾಯಿತು. ಏಕೆಂದರೆ, ಪವಿತ್ರ ಖುರ್ಆನ್ ಎಂತಹ ಉಪಕರಣವೆಂದರೆ, ಅದರ ಮೂಲಕ ಹೃದಯವನ್ನು ಹರಿತಗೊಳಿಸುವಾಗ ಹೃದಯವು ಎಷ್ಟು ಶುಭ್ರವಾಗುತ್ತದೆ ಎಂದರೆ, ಸಕಲ ಲೋಕದ ಅರಿವುಗಳು ಅದರಲ್ಲಿ ಕಾಣಲ್ಪಡುತ್ತವೆ. ಆಗ ಆ ವ್ಯಕ್ತಿಯ ಮುಂದೆ ಎಂತಹ ಒಂದು ಬಾಗಿಲು ತೆರೆಯಲ್ಪಡುತ್ತದೆ ಎಂದರೆ, ತಡೆದಿರಿಸಲಾದ ಅರಿವು ಕೂಡ ಯಾವುದೇ ತಡೆಯಿಲ್ಲದೆ ಆ ವ್ಯಕ್ತಿಯ ಹೃದಯದಲ್ಲಿ ಅವತೀರ್ಣವಾಗುತ್ತದೆ. ಆದ್ದರಿಂದ ಪ್ರತಿಯೊಬ್ಬ ವ್ಯಕ್ತಿಯು ಪವಿತ್ರ ಖುರ್ಆನನ್ನು ಓದಲು ಮತ್ತು ಅದರ ಕುರಿತು ಚಿಂತಿಸಲು ಪ್ರಯತ್ನಿಸಬೇಕು.

ಹಝ್ರತ್ ಉಮರ್(ರ)ರ ವಿನಯವಂತಿಕೆ ಮತ್ತು ನಮ್ರತೆಯ ಬಗ್ಗೆ ಒಂದು ವರದಿಯಲ್ಲಿ ಹೀಗೆ ಪ್ರಸ್ತಾಪ ಬರುತ್ತದೆ. ಜಬೀರ್ ಬಿನ್ ನಫೀರ್ ವರದಿ ಮಾಡುತ್ತಾರೆ – ಹಝ್ರತ್ ಉಮರ್(ರ)ರೊಡನೆ ಒಂದು ಸಂಘವು ಹೀಗೆ ಹೇಳಿತು: ಅಲ್ಲಾಹನಾಣೆ ನಿಮಗಿಂತ ಹೆಚ್ಚು ನ್ಯಾಯಪಾಲನೆ ಮಾಡುವ, ನಿಮಗಿಂತ ಹೆಚ್ಚು ಸತ್ಯವಂತರಾದ ಮತ್ತು ಕಪಟವಿಶ್ವಾಸಿಗಳೊಡನೆ ನಿಮಗಿಂತ ಹೆಚ್ಚು ಕಠಿಣರಾದ ಯಾರನ್ನೂ ನಾವು ಕಂಡಿಲ್ಲ. ಔಫ್ ಬಿನ್ ಮಾಲಿಕ್ ಹೇಳಿದರು: ಅಲ್ಲಾಹನಾಣೆ, ನಾವು ಹಝ್ರತ್ ಪೈಗಂಬರ್(ಸ)ರ ನಂತರ ಹಝ್ರತ್ ಉಮರ್‌ಗಿಂತ ಉತ್ತಮರಾಗಿ ಅಬೂಬಕರ್‌ರನ್ನು ಕಂಡಿದ್ದೇವೆ. ಆಗ ಹಝ್ರತ್ ಉಮರ್(ರ) ಹೇಳಿದರು: ಔಫ್ ಸತ್ಯವನ್ನು ಹೇಳುತ್ತಿದ್ದಾರೆ. ಅಲ್ಲಾಹನಾಣೆ, ಅಬೂಬಕರ್ ಕಸ್ತೂರಿಗಿಂತ ಪರಿಶುದ್ಧರಾಗಿರುವರು. ನಾನಾದರೋ ನನ್ನ ಮನೆಯ ಒಂಟೆಗಿಂತ ಹೆಚ್ಚು ದಾರಿತಪ್ಪಿದವನಾಗಿದ್ದೇನೆ.

ಹಝ್ರತ್ ಅಬೂಹುರೈರ(ರ) ವರದಿ ಮಾಡುತ್ತಾರೆ: ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ)ರ ಸಮೇತ ನಾವು ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಕುಳಿತುಕೊಂಡಿದ್ದೆವು. ಹಝ್ರತ್ ಪೈಗಂಬರ್(ಸ) ಎದ್ದು ಹೋದರು. ಅವರು ಮರಳಿ ಬರಲು ತಡವಾಯಿತು. ನಾನು ಚಿಂತಿತನಾಗಿ ಹಝ್ರತ್ ಪೈಗಂಬರ್(ಸ)ರನ್ನು ಹುಡುಕುತ್ತಾ ಹೋದಾಗ ಅವರನ್ನು ಒಂದು ತೋಟದಲ್ಲಿ ಕಂಡೆನು. ಹಝ್ರತ್ ಪೈಗಂಬರ್(ಸ) ತನ್ನ ಪಾದರಕ್ಷೆಗಳನ್ನು ನೀಡುತ್ತಾ ಹೇಳಿದರು: ತೋಟದ ಹೊರಗೆ ನಿನ್ನನ್ನು ಭೇಟಿಯಾಗುವವರಲ್ಲಿ ಯಾರಾದರೂ ತನ್ನ ಮನಸ್ಸಲ್ಲಿ ದೃಢವಾಗಿ ನಂಬುತ್ತಾ **ಅಲ್ಲಾಹನಲ್ಲದೆ ಆರಾಧನೆಗೆ ಅರ್ಹನು ಬೇರೆ ಯಾರೂ ಇಲ್ಲ** ಎಂದು ಸಾಕ್ಷ್ಯವಹಿಸಿದರೆ ಅವರಿಗೆ ಸ್ವರ್ಗದ ಸುವಾರ್ತೆಯನ್ನು ನೀಡು. ಮೊತ್ತಮೊದಲು ನನ್ನನ್ನು ಹಝ್ರತ್ ಉಮರ್(ರ) ಭೇಟಿಯಾದರು. ಇದನ್ನು ಆಲಿಸುತ್ತಲೇ ಅವರು ನನ್ನನ್ನು ಮರಳಿ ಕಳುಹಿಸಿದರು. ಜೊತೆಗೆ ಅವರು ಕೂಡ ಅಲ್ಲಿಗೆ ಬಂದರು ಮತ್ತು ಹೀಗೆ ವಿನಂತಿಸಿದರು: ಯಾ ರಸೂಲಲ್ಲಾಹ್, ಹಾಗೆ ಮಾಡಬೇಡಿರಿ, ಏಕೆಂದರೆ ಜನರು ಕೇವಲ ಇದರ ಭರವಸೆಯಲ್ಲಿ ಇರುವರು. ಜನರು ಯಥಾರ್ಥ ಸತ್ಯವಿಶ್ವಾಸಿಯಾಗಲಿಕ್ಕಾಗಿ ಒಳಿತಿನ ಬಗ್ಗೆ ಇರುವ ಆದೇಶಗಳ ಪ್ರಕಾರ ನಡೆಯಲಿ. ಹಝ್ರತ್ ಪೈಗಂಬರ್(ಸ) ಹಝ್ರತ್ ಉಮರ್(ರ) ಹೇಳಿದಂತೆ ಮಾಡಲು ಅನುಮತಿ ಕೊಟ್ಟರು.

ಹಝ್ರತ್ ಸಅದ್ ಬಿನ್ ವಖಾಸ್ ವರದಿ ಮಾಡುತ್ತಾರೆ: ಕೆಲವು ಖುರೈಶಿ ಮಹಿಳೆಯರು ಹಝ್ರತ್ ಪೈಗಂಬರ್(ಸ)ರೊಡನೆ ಉಚ್ಚ ಸ್ವರದಲ್ಲಿ ಮಾತನಾಡುತ್ತಿದ್ದರು. ಹಝ್ರತ್ ಉಮರ್(ರ) ಬಂದಾಗ ಹೆದರಿ ಬೇಗನೇ ಎದ್ದು ಮರೆಯಾಗಿ ನಿಂತರು. ಹಝ್ರತ್ ಆಯಿಶ(ರ) ಹೇಳುತ್ತಾರೆ – ಒಬ್ಬಳು ನೀಗ್ರೋ ಮಹಿಳೆ ನೃತ್ಯದಲ್ಲಿ ತನ್ನ ಚಾತುರ್ಯವನ್ನು ತೋರಿಸುತ್ತಿದ್ದಳು. ನಾನು ಕೂಡ ನನ್ನ ಗದ್ದವನ್ನು ಪೈಗಂಬರ್(ಸ)ರ ಹೆಗಲ ಮೇಲೆ ಇರಿಸಿ ನೋಡಲು ಶುರುಮಾಡಿದೆ. ಹಝ್ರತ್ ಉಮರ್(ರ) ಬಂದಾಗ ಜನರು ಓಡಿಹೋದರು.

ಹಝ್ರತ್ ಬರೀದ ವರದಿ ಮಾಡುತ್ತಾರೆ: ಕಪ್ಪು ಬಣ್ಣದ ಒಬ್ಬ ದಾಸಿಯು ಹರಕೆ ಮಾಡಿದ್ದ ಕಾರಣದಿಂದ ಹಝ್ರತ್ ಪೈಗಂಬರ್(ಸ)ರ ಅನುಮತಿಯಿಂದ ದಫ್ ಬಾರಿಸಲು ಶುರುಮಾಡಿದಳು. ಹಝ್ರತ್ ಅಬೂಬಕರ್(ರ), ಹಝ್ರತ್ ಅಲಿ(ರ), ಹಝ್ರತ್ ಉಸ್ಮಾನ್(ರ) ಬಂದರು. ಆಗಲೂ ಅವಳು ಡೋಲು ಬಾರಿಸುತ್ತಿದ್ದಳು. ಆದರೆ ಹಝ್ರತ್ ಉಮರ್(ರ) ಬಂದಾಗ ಅವಳು ತನ್ನ ಡೋಲು ಬಾರಿಸುವುದನ್ನು ನಿಲ್ಲಿಸಿದಳು. ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಉಮರ್, ಶೈತಾನ್ ಕೂಡ ನಿನಗೆ ಹೆದರುತ್ತಾನೆ.

ಹಝ್ರತ್ ಅಬ್ದುಲ್ಲಾಹ್ ಬಿನ್ ಉಮರ್(ರ) ವರದಿ ಮಾಡುತ್ತಾರೆ – ಹಝ್ರತ್ ಪೈಗಂಬರ್(ಸ) ಹೇಳಿದರು: ಅಲ್ಲಾಹನು ಸತ್ಯವನ್ನು ಉಮರ್(ರ)ರ ನಾಲಗೆ ಮತ್ತು

ಹೃದಯದಲ್ಲಿ ಜಾರಿಗೊಳಿಸಿದ್ದಾನೆ. ಹಝ್ರತ್ ಇಬ್ನು ಅಬ್ಬಾಸ್(ರ) ತನ್ನ ಸಹೋದರನಾದ ಫಝ್ಲ್‌ನಿಂದ ವರದಿ ಮಾಡುತ್ತಾರೆ – ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದ್ದಾಗಿ ನಾನು ಕೇಳಿದೆನು: ನಾನು ಇಷ್ಟಪಡುವ ಜಾಗದಲ್ಲಿ ಉಮರ್ ಬಿನ್ ಖತ್ತಾಬ್ ಇರುತ್ತಾರೆ. ಉಮರ್ ಬಿನ್ ಖತ್ತಾಬ್ ಇಷ್ಟಪಡುವ ಜಾಗದಲ್ಲಿ ನಾನು ಇರುತ್ತೇನೆ. ನನ್ನ ನಂತರ ಉಮರ್ ಬಿನ್ ಖತ್ತಾಬ್ ಇರುವ ಜಾಗದಲ್ಲಿ ಸತ್ಯವಿರುವುದು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಒಪ್ಪಂದ ಮಾಡಿದ ನಂತರವೂ ಮಕ್ಕಾನಿವಾಸಿಗಳು ದಂಗೆಯೆದ್ದಾಗ ಅವರನ್ನು ಎದುರಿಸಲು ಹಝ್ರತ್ ಪೈಗಂಬರ್(ಸ)ರೊಡನೆ ಹಝ್ರತ್ ಉಮರ್(ರ) ವಿನಂತಿಸುತ್ತಾ ಹೀಗೆ ಹೇಳಿದರು: ನಾವು ತಮ್ಮ ಸಂರಕ್ಷಣೆಗಾಗಿ ಸತ್ಯನಿಷೇಧಿಗಳೊಡನೆ ಯುದ್ಧ ಮಾಡುವಂತೆ ಆಗಲಿ ಎಂದು ನಾನು ದಿನಾ ಪ್ರಾರ್ಥಿಸುತ್ತಿದ್ದೆ. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಸತ್ಯಸಂಧವಾದ ಮಾತುಗಳು ಹೆಚ್ಚಾಗಿ ಉಮರರ ನಾಲಗೆಯಿಂದಲೇ ಹೊರಡುತ್ತವೆ. ಹಝ್ರತ್ ಅನಸ್(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಸಹಾಬರ ನಡುವೆ ಕುಳಿತುಕೊಂಡಿರುವಾಗ ಸಹಾಬರಲ್ಲಿ ಯಾರೂ ಹಝ್ರತ್ ಪೈಗಂಬರ್(ಸ)ರನ್ನು ಕಣ್ಣೆತ್ತಿ ನೋಡುತ್ತಿರಲಿಲ್ಲ. ಆದರೆ ಅಬೂಬಕರ್ ಮತ್ತು ಉಮರ್(ರ) ಹಝ್ರತ್ ಪೈಗಂಬರ್(ಸ)ರನ್ನು ನೋಡುತ್ತಿದ್ದರು ಮತ್ತು ಮುಗುಳ್ನಗುತ್ತಿದ್ದರು. ಅದೇ ರೀತಿಯಲ್ಲಿ ಹಝ್ರತ್ ಪೈಗಂಬರ್(ಸ) ಅವರಿಬ್ಬರನ್ನೂ ನೋಡುತ್ತಿದ್ದರು ಮತ್ತು ಮುಗುಳ್ನಗುತ್ತಿದ್ದರು.

ಅಬ್ದುಲ್ಲಾಹ್ ಬಿನ್ ಹಂತಬ್ ವರದಿ ಮಾಡುತ್ತಾರೆ: ಹಝ್ರತ್ ಅಬೂಬಕರ್ ಮತ್ತು ಹಝ್ರತ್ ಉಮರ್‌ರನ್ನು ಹಝ್ರತ್ ಪೈಗಂಬರ್(ಸ) ನೋಡಿ ಹೀಗೆ ಹೇಳಿದರು: ಇವರಿಬ್ಬರೂ ಕಿವಿ ಮತ್ತು ಕಣ್ಣಾಗಿರುವರು. ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾಃ ವರದಿ ಮಾಡುತ್ತಾರೆ – ಹಝ್ರತ್ ಅಬೂಬಕರ್(ರ) ಹೇಳಿದರು: ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದ್ದಾಗಿ ನಾನು ಕೇಳಿದ್ದೇನೆ: ಉಮರ್‌ಗಿಂತ ಉತ್ತಮ ವ್ಯಕ್ತಿಯ ಮೇಲೆ ಸೂರ್ಯನು ಉದಯಿಸಿಲ್ಲ. ಹಝ್ರತ್ ಪೈಗಂಬರ್(ಸ) ಹೇಳಿದ್ದಾಗಿ ಹುದೈಫ ವರದಿ ಮಾಡುತ್ತಾರೆ: ನನ್ನ ನಂತರ ಅಬೂಬಕರ್ ಮತ್ತು ಉಮರ್‌ರನ್ನು ಅನುಸರಿಸಿರಿ.

ಹಝ್ರತ್ ಪೈಗಂಬರ್(ಸ) ಹೇಳಿದ್ದಾಗಿ ಹಝ್ರತ್ ಅಬೂಸಈದ್ ಖುದ್‌ರಿ ವರದಿ ಮಾಡುತ್ತಾರೆ: ಪ್ರತಿಯೊಬ್ಬ ಪ್ರವಾದಿಯ ಬಳಿ ಆಕಾಶದವರಲ್ಲಿ ಎರಡು ಕಾರ್ಯನಿರ್ವಾಹಕರು ಇರುತ್ತಾರೆ. ಅದೇ ರೀತಿಯಲ್ಲಿ ಭೂಮಿಯ ನಿವಾಸಿಗಳಲ್ಲಿ ಇಬ್ಬರು ಕಾರ್ಯದರ್ಶಿಗಳು ಇರುತ್ತಾರೆ. ಆಕಾಶದವರಲ್ಲಿ ನನ್ನ ಎರಡು ಕಾರ್ಯದರ್ಶಿಗಳು ಜಿಬ್ರೀಲ್ ಮತ್ತು ಮೀಕಾಯಿಲ್ ಆಗಿರುವರು ಹಾಗೂ ಭೂಮಿಯವರಲ್ಲಿ ನನ್ನ ಇಬ್ಬರು ಕಾರ್ಯದರ್ಶಿಗಳು ಅಬೂಬಕರ್ ಮತ್ತು ಉಮರ್ ಆಗಿರುವರು. ಅಬೂ ಜಹೀಫ ಹೇಳುತ್ತಾರೆ – ಹಝ್ರತ್ ಅಲಿ(ರ) ಹೀಗೆ ಹೇಳಿದ್ದಾಗಿ ನಾನು ಆಲಿಸಿದ್ದೇನೆ: ಈ ಸಮುದಾಯದಲ್ಲಿ ನಬಿ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಂತರ ಅತ್ಯುತ್ತಮರು ಅಬೂಬಕರ್(ರ) ಮತ್ತು ಉಮರ್(ರ) ಆಗಿರುವರು.

ಈ ಪ್ರಸ್ತಾಪ ಮುಂದುವರೆಯುವುದು. ಇನ್‌ಶಾ ಅಲ್ಲಾಹ್.

(ಖುತ್‌ಬದ ಕೊನೆಯಲ್ಲಿ ಹುಝೂರ್, ಪೆಶಾವರದ ಸನ್ಮಾನ್ಯ ಕಾಮ್‌ರಾನ್ ಅಹ್ಮದ್ ಸಾಹಿಬ್ ಶಹೀದ್, ಅಮೇರಿಕದಲ್ಲಿ ಉಂಟಾದ ರಸ್ತೆ ಅಪಘಾತದಲ್ಲಿ ಮೃತರಾದ ಡಾಕ್ಟರ್ ಮಿರ್ಝಾ ನಬೀರ್ ಅಹ್ಮದ್ ಮತ್ತು ಅವರ ಪತ್ನಿ ಆಯಿಶ ಅಂಬರ್ ಸಯ್ಯದ್, ಕರಾಚಿಯ ಚೌಧರಿ ನಸೀರ್ ಅಹ್ಮದ್ ಸಾಹಿಬ್, ಪಶ್ಚಿಮ ರಬ್ವದ ದಾರುರ್ರಹ್ಮತ್ತಿನ ಸರ್‌ದಾರಾನ್ ಬೀಬಿ ಸಾಹಿಬ ಇವರ ಬಗ್ಗೆ ಪ್ರಸ್ತಾಪಿಸಿ ಅವರ ಸೇವೆಗಳ ಬಗ್ಗೆ ಹೇಳಿಕೊಂಡು ಜುಮಾ ನಮಾಝ್ ನಂತರ ಅವರ ಜನಾಝ ನಮಾಝ್ ನಿರ್ವಹಿಸುವುದಾಗಿಯೂ ಘೋಷಿಸಿದರು.)

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُبِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ o اُذْكُرُوااللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis(atba)***

*At, Masjid Mubarak, Islamabad, Tilford, UK, On 12-11-2021*

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim |***Layout****:* U Basheer Ahmad

***Published By****:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon